# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 640 |
| ಸದಸ್ಯರ ಹೆಸರು | ಶ್ರೀ.ಎಂ.ಎ.ಗೋಪಾಲಸ್ವಾಮಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 17.09.2021 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋವಿಡ್-19 ಕಾಯಿಲೆಯ ಪ್ರಭಾವದಿಂದ ರೈತರು ಬೆಳೆದ ಬೆಳೆಗಳು ಖರೀದಿಯಾಗದೆ ರಾಜ್ಯದ ಸಾವಿರಾರು ರೈತರು ಸಂಕಷ್ಟಕ್ಕೆ ಒಳಗಾಗಿದ್ದು, ಈ ಸಂದರ್ಭದಲ್ಲಿ ರೈತರಿಗೆ ಸಹಾಯವಾಗುವಂತೆ ಸರ್ಕಾರವು ಯಾವುದಾದರೂ ಪರಿಹಾರಗಳನ್ನು ಘೋಷಿಸಿದೆಯೇ; ಘೋಷಿಸಿದ್ದಲ್ಲಿ, ಪರಿಹಾರದ ವಿವರಗಳನ್ನು ನೀಡುವುದು;</td><td>2020-21ನೇ ಸಾಲಿನಲ್ಲಿ ಕೋವಿಡ್-19 - ಲಾಕ್ ಡೌನ್ ಸಮಸ್ಯೆಯಿಂದ ಸಂಕಷ್ಟಕ್ಕೆ ಒಳಗಾಗಿರುವ ಮುಸುಕಿನ ಜೋಳವನ್ನು ಬೆಳೆದ 2019-20ನೇ ಸಾಲಿಗೆ ರೈತರಿಗೆ ರೂ.5000/-ರಂತೆ ಆರ್ಥಿಕ ನೆರವನ್ನು ಘೋಷಿಸಲಾಗಿದ್ದು, ನೇರ ನಗದು ವರ್ಗಾವಣೆ (DBT) ಮೂಲಕ ರಾಜ್ಯದ 809733 ರೈತರಿಗೆ ರೂ.389.53 ಕೋಟಿ ಪರಿಹಾರವನ್ನು ಪಾವತಿಸಲಾಗಿದೆ.</td></tr>
<tr><td>ಆ)</td><td>ಇದರಲ್ಲಿ, ಹಾಸನ ಜಿಲ್ಲೆಗೆ ಬಿಡುಗಡೆಯಾದ ಅನುದಾನವೆಷ್ಟು;ಈ ಅನುದಾನದಲ್ಲಿ ಪರಿಹಾರ ಪಡೆದ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು).</td><td>ಬೆಳೆ ಸಮೀಕ್ಷೆ ತಂತ್ರಾಂಶದಲ್ಲಿ ನೊಂದಣಿಯಾಗಿರುವ ಹಾಸನ ಜಿಲ್ಲೆಯ ಎಲ್ಲಾ ಮುಸುಕಿನ ಜೋಳ ಬೆಳೆಗಾರರನ್ನು ಪರಿಹಾರಕ್ಕಾಗಿ ಪರಿಗಣಿಸಲಾಗಿದೆ. ಪ್ರಸ್ತುತ 74,513 ರೈತರಿಗೆ ಒಟ್ಟು ರೂ. 3718.89 ಲಕ್ಷಗಳ ಪರಿಹಾರಧನವನ್ನು ಪಾವತಿಸಲಾಗಿದೆ. ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>ಫಲಾನುಭವಿಗಳ ಸಂಖ್ಯೆ.</th><th>ಪರಿಹಾರಧನ (ರೂ ಲಕ್ಷಗಳಲ್ಲಿ)</th></tr>
<tr><td>1</td><td>ಆಲೂರು</td><td>6726</td><td>334.21</td></tr>
<tr><td>2</td><td>ಅರಕಲಗೂಡು</td><td>11038</td><td>551.90</td></tr>
<tr><td>3</td><td>ಅರಸೀಕೆರೆ</td><td>6360</td><td>314.48</td></tr>
<tr><td>4</td><td>ಬೇಲೂರು</td><td>13162</td><td>657.78</td></tr>
<tr><td>5</td><td>ಚನ್ನರಾಯ ಪಟ್ಟಣ</td><td>5255</td><td>262.75</td></tr>
<tr><td>6</td><td>ಹಾಸನ</td><td>25608</td><td>1279.56</td></tr>
<tr><td>7</td><td>ಹೊಳೆನರಸೀಪುರ</td><td>6362</td><td>318.10</td></tr>
<tr><td>8</td><td>ಸಕಲೇಶಪುರ</td><td>2</td><td>0.10</td></tr>
<tr><td></td><td>ಒಟ್ಟು</td><td>74513</td><td>3718.89</td></tr>
</table></td></tr>
<tr><td>ಇ)</td><td>ಮೆಕ್ಕೆಜೋಳ ಬೆಳೆದು ಸಂಕಷ್ಟಕ್ಕೀಡಾಗಿರುವ ರೈತರಿಗೆ ತಲಾ ರೂ. 5000/- ದಂತೆ ಪರಿಹಾರ ನೀಡುವ ಯೋಜನೆಯನ್ನು ಸರ್ಕಾರವು ಅಪ್ಪಾನಗೊಳಿಸಿದೆಯೇ; ಹಾಗಿದ್ದಲ್ಲಿ, ಹಾಸನ ಜಿಲ್ಲೆಗೆ ಈ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನವೆಷ್ಟು? (ಈ ಅನುದಾನವನ್ನು ಪಡೆದಿರುವ ಫಲಾನುಭವಿಗಳ ವಿವರವನ್ನು ತಾಲ್ಲೂಕುವಾರು ನೀಡುವುದು).</td><td>ಕೋವಿಡ್-19 ಸಂದರ್ಭದಲ್ಲಿ ಮುಸುಕಿನ ಜೋಳ ಬೆಳೆದು ಆರ್ಥಿಕ ಸಂಕಷ್ಟಕ್ಕೊಳಗಾದ ರೈತರಿಗೆ ನೆರವಾಗಲು ಮುಸುಕಿನ ಜೋಳದ ನೇರ ನಗದು ವರ್ಗಾವಣೆ ಯೋಜನೆಯನ್ನು ಘೋಷಿಸಲಾಗಿದ್ದು, ಹಾಸನ ಜಿಲ್ಲೆಯಲ್ಲಿ ಪ್ರಸ್ತುತ 74513 ರೈತರಿಗೆ ರೂ.5000/-ರಂತೆ ನೇರ ನಗದು ವರ್ಗಾವಣೆ ಮೂಲಕ ಒಟ್ಟು ರೂ.3718.89 ಲಕ್ಷಗಳ ಪರಿಹಾರಧವನ್ನು ಪಾವತಿಸಲಾಗಿದೆ. ತಾಲ್ಲೂಕುವಾರು ಫಲಾನುಭವಿಗಳ ವಿವರಗಳನ್ನು ಪ್ರತ್ಯೇಕವಾಗಿ ಸಿಡಿಯಲ್ಲಿ ನೀಡಲಾಗಿದೆ.</td></tr>
</table>

**ಸಂಖ್ಯೆ: AGRI-ACT/124/2021**

(ಬಿ.ಸಿ. ಪಾಟೀಲ್)
ಕೃಷಿ ಸಚಿವರು